ಕಾರ್ಯವನ್ನು ನಡೆಸುವುದಕ್ಕೆ ತಾವು ಏನಾದರೂ ಯೋಚನೆ ಮಾಡುತ್ತೀರಾ ? ಎರಡನೆಯದಾಗಿ ಕಾಡನ್ನು ಉಳಿಸುವ ಬದಲಾಗಿ ಟಾಟಾ ಬಿರ್ಲಾರವರನ್ನು ಉಳಿಸುವ ಸಲುವಾಗಿ ನೀಲಗಿರಿ ಮರಗಳನ್ನು ಬೆಳೆಸತಕ್ಕಂಥ ಯೋಜನೆ ಏನು ಇದೆ ಅದನ್ನು ಇನ್ನು ಮುಂದಾದರೂ ಕೈಬಿಡುತ್ತೀರಾ ಎಂದು ಕೇಳಂತ್ತೇನೆ.

ಶ್ರೀ ಜಿ.ಎಸ್. ಬಾಗಲಕೋಟೆ.—ಪಶ್ಚಿಮ ಘಟ್ಟಗಳನ್ನು ಉಳಿಸಿ ಎನ್ನುವ ಚಳುವಳಿಗಾರರಿಗೆ ಸರ್ಕಾರ ಎಲ್ಲಾ ರೀತಿಯ ಸಹಕಾರವನ್ನು ಮಾಡುತ್ತಿದೆ. ಈಗಾಗಲೇ ಹೇಳಿದ್ದೇನೆ. ಅವರ ಜೊತೆಯಲ್ಲಿ ಬೇರೆ ರೀತಿಯ ಮಾತುಗಳನ್ನು ನಡೆಸಿ ಅತ್ಯಾವಶ್ಯಕ ಕಂಡುಬಂದಲ್ಲಿ ಸರ್ಕಾರ ಯಾವರೀತಿಯ ಸಹಕಾರವನ್ನು ಕೊಡುವ ವಿಚಾರದಲ್ಲಿ ಹಿಂದೆ ಸರಿಯುವುದಿಲ್ಲ. ಜೊತೆಗೆ ಮಾನ್ಯ ಸದಸ್ಯರು ನೀಲಗಿರಿ ಮರಗಳನ್ನು ಬೆಳೆಸುವ ಬಗ್ಗೆ ಹೇಳಿದ್ದಾರೆ. ನೀಲಗಿರಿ ಮರಗಳನ್ನು ಬೆಳೆಯುತ್ತಿರುವುದು ಕೇವಲ ಕಾರ್ಖಾನೆಗಳಿಗೆ ಕೊಡುವುದಕ್ಕೆ ಮಾತ್ರವಲ್ಲ, ಬಡವರಿಗೆ ಬೇಕಾದಂಥ ಉರುವಲು ಕಟ್ಟಿಗೆಗೋಸ್ಕರವಾಗಿಯೂ ಕೂಡ ನಿರ್ದಿಷ್ಟವಾದ ಪ್ರದೇಶಗಳಲ್ಲಿ ಬೆಳೆಸುತ್ತಿದ್ದೇವೆ. ಈ ಬಗ್ಗೆ ಹೆಚ್ಚಿನ ಮಾಹಿತಿ ನಮ್ಮಲ್ಲಿ ಇಲ್ಲ, ಮಾನ್ಯ ಸದಸ್ಯರು ಬೇರೆ ರೀತಿಯಲ್ಲಿ ಪ್ರಶ್ನೆ ಕೇಳಿದರೆ ಉತ್ತರವನ್ನು ಕೊಡುತ್ತೇನೆ.

ರಾಜ್ಯದ ಅರಣ್ಯದಲ್ಲಿರುವ ಹುಲಿಗಳು

೧೮೬. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ರಾಜ್ಯದ ಅರಣ್ಯಗಳಲ್ಲಿರುವ ಹುಲಿಗಳ ಸಂಖ್ಯೆ ಎಷ್ಟು ?

೨) ಈ ಹುಲಿಗಳನ್ನು ಯಾವಾಗ ಸಮೀಕ್ಷೆ ಮಾಡಲಾಯಿತು ?

೩) ಕಳೆದ ಮೂರು ವರ್ಷಗಳಲ್ಲಿ ಅರಣ್ಯಗಳಲ್ಲಿ ಹುಲಿಗಳ ಹತ್ಯೆ ನಡೆದಿದ್ದೀತೆ ? ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು ?

೪) ಹುಲಿಗಳ ಸಂರಕ್ಷಣೆಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಜಿ.ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

೧) ರಾಜ್ಯದಲ್ಲಿರುವ ಅರಣ್ಯಗಳಲ್ಲಿ ಸುಮಾರು ೨೦೨ ಹುಲಿಗಳಿರುತ್ತದೆ.

೨) ಹುಲಿಗಳ ಸಮೀಕ್ಷೆಯನ್ನು ೧೯೮೪ರಲ್ಲಿ ಮಾಡಲಾಯಿತು.

೩) –ಇಲ್ಲ–

೪) ಇಡೀ ಬಂಡೀಪುರವನ್ನು ರಾಷ್ಟ್ರೀಯ ಉದ್ಯಾನವನವನ್ನಾಗಿ ಹುಲಿ ಯೋಜನೆಯ ಅಡಿಯಲ್ಲಿ ತರಲಾಗಿದೆ. ಹಾಗೂ ಸರ್ಕಾರದವರು ಐದು ರಾಷ್ಟ್ರೀಯ ಉದ್ಯಾನವನಗಳನ್ನು ಮತ್ತು ೧೮ ಅಭಯಾರಣ್ಯಗಳನ್ನು ಹುಲಿ ಮತ್ತಿತರ ವನ್ಯ ಪ್ರಾಣಿಗಳ ಸಂರಕ್ಷಣೆಗಾಗಿ ರಚಿಸಲಾಗಿದೆ. ಹುಲಿ ಮತ್ತಿತರ ವನ್ಯಪ್ರಾಣಿಗಳನ್ನು ಅವ್ಯಾಹತವಾಗಿ ರಕ್ಷಿಸಲು ಇಲಾಖೆಯ ರಕ್ಷಣೆ ದಳಗಳಿಗೆ ನಿಸ್ತಂತು, ವಾಹನ, ಆಯುಧಗಳು ಮುಂತಾದವುಗಳನ್ನು ಒದಗಿಸಲಾಗಿದೆ.

ಶ್ರೀ ವೇದಾಂತ ಹೆಮ್ಮಿಗೆ.— ಮಾನ್ಯ ಅಧ್ಯಕ್ಷರೇ ೧೯೮೪ರಲ್ಲಿ ಸಮೀಕ್ಷೆ ನಡೆಸಿ ೨೦೨ ಹುಲಿಗಳು ಇರುತ್ತವೆಂದು ಹೇಳಿದ್ದಾರೆ. ಈಗ ೧೯೮೭ ರಿಂದ ಈ ಮೂರು ವರ್ಷಗಳಲ್ಲಿ ಹುಲಿಗಳ ಸಂಖ್ಯೆ ಎಷ್ಟು ಜಾಸ್ತಿಯಾಗಿದೆ ಎನ್ನುವುದನ್ನು ಹೇಳುವುದಕ್ಕೆ ಅಂಕಿಅಂಶಗಳು ಇದೆಯೇ? ಸಮೀಕ್ಷೆಯನ್ನು ಎಷ್ಟು ವರ್ಷಗಳಿಗೆ ಒಂದುಬಾರಿ ನಡೆಸುತ್ತೀರಿ? ಸಮೀಕ್ಷೆಯನ್ನು ನಡೆಸತಕ್ಕಂಥ ಜನರು ಯಾರು? ಅವರು ಸಮೀಕ್ಷೆಯನ್ನು ನಡೆಸಲು ಪರಿಣತಿಯನ್ನು ಪಡೆದಿರುತ್ತಾರೆಯೇ ಎಂಬುದನ್ನು ತಿಳಿಸಬೇಕು?

ಶ್ರೀ ಜಿ.ಎಸ್. ಬಾಗಲಕೋಟೆ.— ಮಾನ್ಯ ಅಧ್ಯಕ್ಷರೇ, ೧೯೮೪ ರಿಂದ ಈಚೆಗೆ ನಿಶ್ಚಿತವಾಗಿ ಹುಲಿಗಳ ಸಂಖ್ಯೆ ಜಾಸ್ತಿಯಾಗಿದೆ. ಎಷ್ಟು ಜಾಸ್ತಿಯಾಗಿದೆ ಎನ್ನುವ ಬಗ್ಗೆ ವಿವರಗಳು ಸದ್ಯಕ್ಕೆ ನಮ್ಮಲ್ಲಿ ಇಲ್ಲ. ಜೊತೆಗೆ ಹುಲಿಗಳನ್ನು ಯಾರು ಸಮೀಕ್ಷೆ ನಡೆಸುತ್ತಾರೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಅರಣ್ಯ ಇಲಾಖೆಯಲ್ಲಿ ಪ್ರಾಣಿಗಳ ಒಂದು ಸ್ವಭಾವವನ್ನು ಅರಿತಿರುವ ಪರಿಣತರು ಹುಲಿಗಳ ಸಮೀಕ್ಷೆ

ಯನ್ನು ಮಾಡುತ್ತಾರೆ, ಹುಲಿಗಳ ಸಮೀಕ್ಷೆಯನ್ನು ಐದು ವರ್ಷಗಳಿಗೆ ಒಮ್ಮೆ ಮಾಡುತ್ತಿದ್ದೇವೆ. ಇನ್ನು ಐದು ವರ್ಷಗಳಲ್ಲಿ ಅಂದರೆ ೧೯೯೦ರಲ್ಲಿ ಮತ್ತೆ ಹುಲಿಗಳ ಸಮೀಕ್ಷೆಯನ್ನು ಮಾಡುತ್ತೇವೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ ೧೮ ಅಭಯಾರಣ್ಯಗಳಲ್ಲಿ ಒಟ್ಟಿಗೆ ೨೦೨ ಹುಲಿಗಳು ಇರುತ್ತವೆಂದು ಹೇಳಿದ್ದಾರೆ. ಯಾವ ಯಾವ ಅರಣ್ಯಗಳಲ್ಲಿ ಎಷ್ಟೆಷ್ಟು ಹುಲಿಗಳು ಇವೆ ಎನ್ನುವುದನ್ನು ಹೇಳಬೇಕು. ಎರಡನೆಯದಾಗಿ ೨೦೨ ಹುಲಿಗಳಲ್ಲಿ ಎಷ್ಟು ಹೆಣ್ಣು ಹುಲಿಗಳು, ಎಷ್ಟು ಗಂಡುಹುಲಿಗಳು ಇವೆ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಜಿ.ಎಸ್. ಬಾಗಲಕೋಟೆ —ಮಾನ್ಯ ಅಧ್ಯಕ್ಷರೇ ಮಾನ್ಯ ಹಿರಿಯ ಸದಸ್ಯರಾದ ಹೆಮ್ಮಿಗೆ ಯವರು ಯಾವ ಯಾವ ಅಭಯಾರಣ್ಯಗಳಲ್ಲಿ ಎಷ್ಟೆಷ್ಟು ಹುಲಿಗಳಿಗೆ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ.

ಶ್ರೀ ಬಿ.ಎಸ್. ಯಂಡಿಯೂರಪ್ಪ.— ಹೆಣ್ಣು–ಗಂಡುಹುಲಿಗಳನ್ನು ಪತ್ತೆ ಮಾಡಲಂ ವೇದಾಂತ ಹೆಮ್ಮಿಗೆಯವರನ್ನು ಕಾಡಿಗೆ ಕಳುಹಿಸಬೇಕಾಗುತ್ತದೆ.

ಅಧ್ಯಕ್ಷರು.—ಈಗ ಉತ್ತರ ಹೇಳಂವುದನ್ನು ಕೇಳಿ, ಆ ಮೇಲೆ ಬೇಕಾದರೆ ಕೇಳುವಿರಂತೆ.

ಶ್ರೀ ಜಿ. ಎಸ್. ಬಾಗಲಕೋಟೆ.— ೧೮ ಅಭಯಾರಣ್ಯಗಳು ಏನಿವೆ ಅವು ಕೇವಲ ಹುಲಿಗಳಿರತಕ್ಕ ಅಭಯಾರಣ್ಯಗಳಲ್ಲ. ಕೆಲವು ಪಕ್ಷಿಧಾಮಗಳು ಇವೆ, ಬೇರೆಬೇರೆ ಪ್ರಾಣಿಗಳಿಗೆ ಸಂಬಂಧಿಸಿದ ಕೇಂದ್ರಗಳೂ ಇವೆ. ಆದರೆ ನಿಶ್ಚಿತವಾಗಿ ಯಾವ ಯಾವ ಅಭಯಾರಣ್ಯಗಳಲ್ಲಿ ಎಷ್ಟೆಷ್ಟು ಹುಲಿಗಳಿವೆ ಎನ್ನುವಂಥ ಅಂದಾಜಿನ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಹಾಲಿ ಇರತಕ್ಕ ಹುಲಿಗಳಲ್ಲಿ ೭೩ ಗಂಡು ಹುಲಿಗಳು, ೯೪ ಹೆಣ್ಣು ಹುಲಿಗಳು ಮತ್ತು ಅವುಗಳಲ್ಲಿ ೩೫ ಮರಿಗಳು ಇವೆ.

ಶ್ರೀ ವೇದಾಂತ ಹೆಮ್ಮಿಗೆ.—ಕಳೆದ ೩ ವರ್ಷಗಳಲ್ಲಿ ಅರಣ್ಯಗಳಲ್ಲಿ ಹುಲಿಗಳ ಹತ್ಯೆ ನಡೆದ ಸಂಖ್ಯೆ ಎಷ್ಟು ಎಂಬ ಪ್ರಶ್ನೆಗೆ ಉತ್ತರ ಇಲ್ಲವೆಂದು ಹೇಳಿದ್ದೀರಿ, ನ್ಯಾಚುರಲ್ ಡೆತ್ ಅಥವಾ ಖಾಯಿಲೆಯಿಂದ ಎಷ್ಟು ಹುಲಿಗಳು ಸತ್ತಿವೆ?

ಶ್ರೀ ಜಿ ಎಸ್. ಬಾಗಲಕೋಟೆ.—ಮಾನ್ಯ ಸದಸ್ಯರು ಕೇಳಿದ ಮಾಹಿತಿಯನ್ನು ನಂತರ ಒದಗಿಸಿಕೊಡುತ್ತೇನೆ.

ಪ್ರಶ್ನೆ ೯೬ (ಳಿಠಿಟ) ಶ್ರೀ ಆರ್. ಎಸ್. ನಾಯಂಕ್.— (ಸದಸ್ಯರು ಹಾಜರಿರಲಿಲ್ಲ)

ಖಾಸಗಿ ಫ್ಲೈವುಡ್ ಕಾರ್ಖಾನೆಗಳು

ಪ್ರ. ಸಂ. ೯೭ (೫೩೨) ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಖಾಸಗಿ ಫ್ಲೈವುಡ್ ಕಾರ್ಖಾನೆಗಳಿಗೆ ಎಲ್ಲೆಲ್ಲಿ ಎಷ್ಟು ಅರಣ್ಯ ಪ್ರದೇಶವನ್ನು ಗುತ್ತಿಗೆಗೆ ನೀಡಲಾಗಿದೆ.

ಆ) ಇದರ ನಿಬಂಧನೆಗಳೇನು ಹಾಗೂ ಗುತ್ತಿಗೆ ಯಾವಾಗ ಕೊನೆಗೊಳ್ಳುತ್ತದೆ?

ಶ್ರೀ ಜಿ. ಎಸ್. ಬಾಗಲಕೋಟೆ,—(ಅರಣ್ಯ ರಾಜ್ಯ ಮಂತ್ರಿಗಳು).—

ಯಾವುದೇ ಅರಣ್ಯ ಪ್ರದೇಶವನ್ನು ಫ್ಲೈವುಡ್ ಕಾರ್ಖಾನೆಗಳಿಗೆ ಗುತ್ತಿಗೆ ಮೇಲೆ ನೀಡಿಲ್ಲ. ವರ್ಕಿಂಗ್ ಪ್ಲಾನ್ ಪ್ರಕಾರ ನಿರ್ದಿಷ್ಟ ಅರಣ್ಯ ಪ್ರದೇಶದಿಂದ ಸಂಗ್ರಹ ಮಾಡಿದ ಫ್ಲೈವುಡ್ ಮರವು, ಗುರುತಿಸಿದ ಕಾರ್ಖಾನೆಗೆ ಮಾತ್ರ ನೀಡಲಂ ಒಪ್ಪಂದ ಮಾಡಿಕೊಳ್ಳಲಾಗಿದೆ. ಇಂತಹ ಒಪ್ಪಂದಗಳ ವಿವರ ಲಗತ್ತಿಸಿರುವ ಪಟ್ಟಿಯಲ್ಲಿ ನೀಡಿದೆ.

ಒಪ್ಪಂದಗಳ ಅವಧಿಗಳು ಲಗತ್ತಿಸಿರುವ ಪಟ್ಟಿಯಲ್ಲಿ ನೀಡಿದೆ. ಸರ್ಕಾರವು ಮಾಡಿಕೊಳ್ಳುತ್ತಿರುವ ಕರಾರುನಾಮೆಗಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಷರತ್ತುಗಳಲ್ಲದೇ ಈ ಕೆಳಗೆ ಕಾಣಿಸಿದ ವಿಷಯಗಳಂ ಷರತ್ತುಗಳಲ್ಲಿ ಸೇರಿರುತ್ತವೆ.